

ಅರೆಚಂದ್ರನ ನಸುಬೆಳದಿಂಗಳಲ್ಲಿ ಗುನುಂಗ್ ಪದಾಂಗ್‌ನ ಶಿಲಾಸ್ತಂಭಗಳು



ಗಂಭೀರವಾಗಿ ಅನುಮಾನಗಳಿದ್ದವು. ಸುಮಾರು ಸಮಯ ಹೀಗೆಯೇ ಸುತ್ತಿ ತಿರುಗಿ ಅದೆಲ್ಲಿಗೆ ತಂದು ನಿಲ್ಲಿಸಿದ್ದನೋ ಆತನಿಗೂ ತಿಳಿಯಲಿಲ್ಲ. ಪೂರ್ಣ ಬೆಟ್ಟಗಳಲ್ಲಿ ಮತ್ತೆ ಕಳೆದುಹೋಗಿದ್ದ ಈ ಅಪ್ಪಟ ಜಾವಾದ ಸ್ಥಳೀಯ ಹುಡುಗ.

ಡೀಯನ್, ಅಸ್ಮಾ ಅವರ ಪತಿಗೆ ಫೋನ್ ಮಾಡಿದ. ಅವರು ಹೇಳಿದರು 'ನೀವಿನ್ನೂ ಗುನುಂಗ್ ಪದಾಂಗ್‌ನಿಂದ 72 ಕಿಲೋಮೀಟರ್ ದೂರದಲ್ಲಿದ್ದೀರ'. ನನಗೆ ದಿಗ್ಭ್ರಮೆ! 'ತಡವಾಗಿದೆ, ನಾಳೆ ಹೋಗುವಿರೇನು?' ಅವರು ಕೇಳಿದರು. 'ಇಲ್ಲ, ಇವತ್ತೇ ಹೋಗುತ್ತೇವೆ' ಎಂದೆ. ಬೇರೆ ದಾರಿ ಕಾಣದೆ ಡೀಯನ್ ಮತ್ತೆ ಗೂಗಲ್ ಹಾಕಿ ಹೊರಟರು. 'ಈಕೆಯನ್ನು ಗುನುಂಗ್ ಪದಾಂಗ್‌ಗೆ ತಲುಪಿಸುವವರೆಗೂ ತನಗೆ ಮುಕ್ತಿ ಇಲ್ಲ' ಎಂದು ಆತನಿಗೂ ಮನವರಿಕೆಯಾದಂತಿತ್ತು. ಸ್ವಲ್ಪ ಹೊತ್ತು, ಗೂಗಲ್ ನೋಡುತ್ತಿದ್ದ ಮಂಜುಳಾ, 'ಹೌದು ಇನ್ನೂ 72 ಕಿಲೋಮೀಟರ್ ತೋರುತ್ತಿದೆ' ಎಂದವರು, ಮರುಕ್ಷಣ 'ಅರೆ ತಲುಪಲು 13 ಗಂಟೆ ತೋರಿಸುತ್ತಿದೆ' ಎಂದು ಗಾಬರಿಯೂ ಆದರು. 'ನಾಳೆ ಬೆಳಗ್ಗೆ ತಲುಪುತ್ತೇವೆ ಎನ್ನುತ್ತಿದೆ' ಮತ್ತೆ ಅವರು ಹೇಳಿದಾಗ, 'ಮೊಬೈಲ್ ಆಫ್ ಮಾಡಿ' ಎಂದೆ.

ಈ ಬೆಟ್ಟ ಗುಡ್ಡದ ಪರಿಸರದಲ್ಲಿ ಸಿಗ್ನಲ್ ತೊಂದರೆ ಅಷ್ಟೇ ಅಲ್ಲ, ಹೆಚ್ಚು ಜನ ಸರಿದಾಡದ, 'ಅಪ್‌ಡೇಟ್' ಆಗಿರದ ಹಾದಿಗಳಲ್ಲಿ 'ಗೂಗಲ್' ಒಂದನ್ನೇ ಆಧರಿಸುವಂತಿಲ್ಲ. ಮತ್ತೆ ಗಂಟೆಗಳು ಕಳೆದವು. 'ನಾಲ್ಕೂವರೆ ಆಗಿಯೇ ಹೋಯಿತು' ಮಂಜುಳಾ ಹೇಳಿದರು. ನಾವಿನ್ನೂ ಸುಮಾರು 35 ಕಿಲೋಮೀಟರ್ ದೂರದಲ್ಲಿದ್ದೆವು. ಗುನುಂಗ್ ಪದಾಂಗ್ ಇರುವುದು 'ಕಾರ್ಯಮುಕ್ತಿ' ಎಂಬ ಪುಟ್ಟ ಹಳ್ಳಿಯಲ್ಲಿ. ಮುಕ್ತಿಯೇ ಇಲ್ಲದ ದಾರಿಯಲ್ಲಿ ನಾವು ಸಾಗಿದ್ದೆವು.

ಇದೀಗ ಭೂದೃಶ್ಯ ಬದಲಾಯಿತು, ಉರುಳಾಡುವ ಹಸಿರಿನ ಬೆಟ್ಟಗಳು ಮನಮೋಹಕವಿದ್ದವು. ಆಸ್ವಾದಿಸುವ ಮನಸ್ಥಿತಿ ಇರಲಿಲ್ಲ. ಕಡೆಗೂ ಗಂಟೆ ಐದೂ ಇಪ್ಪತ್ತು, ಮುಂದಿನ ಸೀಟಿನಲ್ಲಿ ಕುಳಿತ ನನಗೆ ಒಂದು ಕಮಾನು ಕಂಡಿತು, ಅದರ ಮೇಲೆ 'ಗುನುಂಗ್ ಪದಾಂಗ್' ಅಕ್ಷರಗಳನ್ನು ಕಂಡೊಡನೆ, ನಾವು 'ಕಾರ್ಯಮುಕ್ತಿ' ಹಳ್ಳಿಯ ಪ್ರವೇಶ ದ್ವಾರದಲ್ಲಿರುವುದು ತಿಳಿಯಿತು. ಈ ಪುಟ್ಟ ಹಳ್ಳಿಗಿದ್ದ ಏಕರಸ್ತೆಯಲ್ಲಿ ಏರುತ್ತಾ ಬಂದ ಕಾರು, ಹಳ್ಳಿಯ ಹೊರಗೆ ಗುಡ್ಡದ ನಡು ಭಾಗದಲ್ಲೆಲ್ಲೋ ನಿಂತದ್ದು ಅರಿವಾಯಿತು. ಎದುರಿಗೆ ದೊಡ್ಡದಾಗಿ 'ಗುನುಂಗ್ ಪದಾಂಗ್' ಎನ್ನುವ ಹಳದಿ ಅಕ್ಷರಗಳು ಹಸಿರ ಹಿನ್ನೆಲೆಯಲ್ಲಿ ಹೊಳೆದವು. ಅದರ ಬಗಲಿಗೆ ಪ್ರವೇಶ ದ್ವಾರವೊಂದು ನಿಂತಿತ್ತು. ಅದರ ಬಾಗಿಲು ಮುಚ್ಚಿತ್ತು. ಗಂಟೆ ಐದೂವರೆ ಆಗಿತ್ತು. ಕಡೆಗೂ ತಲುಪಿದ ಸಂತಸ, ಮುಚ್ಚಿದ ಬಾಗಿಲ ನಿರಾಶೆ – ಎರಡೂ ಒಟ್ಟಿಗೆ ಆವರಿಸಿದವು.

ಆದರೆ ಈಗೊಂದು ಅದ್ಭುತ ನಡೆಯಿತು. ಹಳ್ಳಿಯ ಹೊರವಲಯದ ಯಾರೊಬ್ಬರೂ ಇಲ್ಲದ ಈ ಜಾಗದಲ್ಲಿ, ಅಲ್ಲೊಬ್ಬ ಯುವಕ ಕಂಡ. ಆತ ಗುನುಂಗ್ ಪದಾಂಗ್‌ಗೆ ಸಂಬಂಧಿಸಿದವನಾಗಿದ್ದ. ಡೀಯನ್ ಆತನಿಗೆ ತಮ್ಮ ಭಾಷೆಯಲ್ಲಿ ಹೇಳಿದ. ಆ ಯುವಕ ಉತ್ಸಾಹದಿಂದ 'ಬನ್ನಿ' ಎಂದು ಸನ್ನೆ ಮಾಡಿದ. ಗುಡ್ಡಕ್ಕಿದ್ದ ಸಣ್ಣ ಗೇಟಿನ ಬಾಗಿಲು ತೆರೆಯಿತು. ಕಣ್ಣರಳಿಸಿ ನಾವು ನೋಡಿದಂತೆ, ಎದುರಲ್ಲಿ ಏರಿ ನಿಂತಿತ್ತು ಜ್ವಾಲಾಮುಖಿಯ ಕಠಿಣ ಶಿಲೆಗಳ ಪುರಾತನ ಮೆಟ್ಟಿಲುಗಳು. ಇತಿಹಾಸದಾಳಕ್ಕೆ ತೆರೆದ ಬಾಗಿಲಿನಂತೆ ಕಂಡಿತು, ಸಂಭ್ರಮದಿಂದ ಪ್ರವೇಶಿಸಿದೆವು. ಕೆಲವೇ ಮೆಟ್ಟಿಲು ಏರಿದಂತೆ, ಆತ ನಮ್ಮ ಬಲಕ್ಕಿದ್ದ ಪುರಾತನ ಸಿಹಿ ನೀರಿನ ಕೊಳವನ್ನು ತೋರಿಸಿದ.

## ಅಗ್ನಿಶಿಲೆಗಳ ಮೋಹಕ ದೃಶ್ಯ

ಜ್ವಾಲಾಮುಖಿಯ ಕಲ್ಲುಗಳನ್ನು ತುಂಡರಿಸಿ ನಿರ್ಮಿಸಿದ ಅತ್ಯಂತ ಕಡಿದಾದ ಮೆಟ್ಟಿಲುಗಳು, ಸಾವಿರ ಸಾವಿರ ವರ್ಷಗಳ ಹವಾಮಾನದಲ್ಲಿ ಸವೆದು, ಮುರಿದು, ಕುಸಿದು ಅಡ್ಡಾದಿಡ್ಡಿಯಾಗಿ ಏರುಪೇರಾಗಿದ್ದವು. ಎಚ್ಚರಿಕೆಯಿಂದ ಏರಬೇಕಿತ್ತು. ನಮ್ಮ ಸುತ್ತಲೂ ಮೆಟ್ಟಿಲ ಬಗಲಲ್ಲಿ ದಟ್ಟ ಕಾಡುಮರಗಳ ಬುಡದಲ್ಲಿ ಈ ಗುಡ್ಡದ ಮೇಲೆ